ನಮಗಾಗುತ್ತಿದೆ. ಒಂದೊಂದು ಆಯಾಮವನ್ನೂ ಪರಿಶೀಲಿಸಿದರೆ ಈ ಒಂದು ಸ್ಥೂಲ ನೋಟ ದೊರಕಬಹುದು.

## ದುಡಿಮೆ, ಮಹಿಳೆ ಮತ್ತು ಜಾಗತೀಕರಣ

ದುಡಿಮೆಯ ಹಿನ್ನೆಲೆಯಲ್ಲಿ ಮಹಿಳಾ ಸಮುದಾಯವನ್ನಿಟ್ಟು ನೋಡುವುದಾದರೆ, ಸಣ್ಣ ಪ್ರಮಾಣದ ಹೊಸ ಬಗೆಯ ಅವಕಾಶಗಳು ಹೆಚ್ಚು ದೊರೆಯುತ್ತಿವೆ. ಅವುಗಳಿಗಿಂತ ಹೆಚ್ಚು ಅಗ್ಗದ ಕಾರ್ಮಿಕಳ ಸ್ಥಾನ ದೊರೆತಿರುವುದು ಕಾಣುತ್ತದೆ.

ಜಾಗತೀಕರಣವು ದುಡಿಮೆಯಲ್ಲಿ ಲಿಂಗ ಸಮಾನತೆಯನ್ನು ತರುತ್ತದೆಂದು ಹೇಳಲಾಗಿತ್ತು. ಆದರೆ, ಇಪ್ಪತ್ತು ವರ್ಷಗಳ ನಂತರ ನೋಡಿದರೂ, ಇಂದಿಗೂ ಶೇ.93ರಷ್ಟು ಮಹಿಳೆಯರು ಅತ್ಯಂತ ಕೆಳದರ್ಜೆಯ ದುಡಿಮೆಗಾರರಾಗಿ ಇರುವುದನ್ನು ನೋಡುತ್ತೇವೆ. ಒಟ್ಟಾರೆ ದುಡಿಮೆಯ ವಲಯದಲ್ಲಿ ಅಸಂಘಟಿತ ಕ್ಷೇತ್ರದಲ್ಲಿ ಶೇ.67ರಷ್ಟು ಮಹಿಳೆಯರಿದ್ದಾರೆ. ದೊಡ್ಡ ಸಂಸ್ಥೆಗಳ ಆಡಳಿತಗಾರರಾಗಿ ಮಹಿಳೆಯರು ಕುಳಿತಿರುವ ಸಂಖ್ಯೆ ಏರುತ್ತಿರುವುದು ಬೆರಳೆಣಿಕೆಯ ಪ್ರಮಾಣದಲ್ಲಿಯಷ್ಟೆ. ಉದಾಹರಣೆಗೆ, ಭಾರತದ ಮಾಧ್ಯಮ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಯ ಸ್ಥಾನಮಾನದಲ್ಲಿರುವ ಮಹಿಳೆಯರ ಸಂಖ್ಯೆ ಕೇವಲ ಶೇ. 3 ಮಾತ್ರ.

## ಮಹಿಳೆಯರ ಅಗ್ಗದ ದುಡಿಮೆಯ ಆಕರ್ಷಣೆ

ಕಳೆದ ಎರಡು ದಶಕಗಳಲ್ಲಿ ದಕ್ಷಿಣ ಏಷ್ಯಾದ ದೇಶಗಳಾದ ಚೀನಾ, ಭಾರತ, ಬಾಂಗ್ಲಾದೇಶ, ಪಾಕಿಸ್ತಾನಗಳಿಗೆ ಹೆಚ್ಚಿನ ವಿದೇಶೀ ಬಂಡವಾಳ ಹರಿದು ಬಂದಿರುವುದಕ್ಕೆ ಒಂದು ಮುಖ್ಯ ಕಾರಣ ಇಲ್ಲಿನ ಅಗ್ಗದ ದುಡಿಯುವ ವರ್ಗ. ಇದರ ದೊಡ್ಡ ಭಾಗದಲ್ಲಿ ತುಂಬಿರುವವರು ಮಹಿಳೆಯರು. ಜಾಗತೀಕರಣವು ಮಹಿಳೆಯರಿಗೆ ನೀಡಿದ ಬಹುಪಾಲು ಉದ್ಯೋಗಗಳು ಅರೆಕಾಲಿಕ ಉದ್ಯೋಗಗಳು. ಕೆಲಸದ ಭದ್ರತೆಯಿಲ್ಲ, ಯಾವುದೇ ಸವಲತ್ತುಗಳಿಲ್ಲ, ಮನೆಯಿಂದಲೇ ದುಡಿಯಬಹುದೆಂಬ ನೆಪದಲ್ಲಿ ಅತಿ ಕಡಿಮೆ ವೇತನ ನೀಡಲಾಗುತ್ತದೆ. ಕಳೆದೆರಡು ದಶಕಗಳಲ್ಲಿ ವೇಗವಾಗಿ ವಿಸ್ತರಿಸಿರುವ ಸೇವಾ ಕ್ಷೇತ್ರದ ಉದ್ಯೋಗಗಳ ಆಧಾರಸ್ತಂಭವೇ ಮಹಿಳೆಯರ ಅಗ್ಗದ ದುಡಿಮೆ ಎಂದು 'ಎಕಾನಾಮಿಕ್ ಜಸ್ಟೀಸ್ ನ್ಯೂಸ್' ಅಧ್ಯಯನ ಹೇಳುತ್ತದೆ.

ದುಡಿಮೆ ಕ್ಷೇತ್ರದಲ್ಲಿ ಮಹಿಳೆಗೆ ಹೆಚ್ಚಿನ ಅವಕಾಶಗಳು ದೊರೆತಿರುವುದೇನೋ ನಿಜ. ಆದರೆ ಉದ್ಯೋಗದ ಭದ್ರತೆಯಿರುವ, ಸಮಾನ ಕೆಲಸಕ್ಕೆ ಸಮಾನ ವೇತನ ದೊರಕುವ, ಉತ್ತಮ ಔದ್ಯೋಗಿಕ ವಾತಾವರಣವಿರುವ ಉದ್ಯೋಗವೇ ಬೇಕು ಎಂದು ಆರಿಸಿಕೊಳ್ಳುವ ಪರಿಸ್ಥಿತಿ ಬಹುಸಂಖ್ಯಾತ ಮಹಿಳೆಯರಿಗೆ ಇದೆಯೇ? ಖಂಡಿತ ಇಲ್ಲ!

## ಸಾಮಾಜಿಕ ಸ್ಥಾನಮಾನ: ನೋವೋ ನಲಿವೋ?

ಹಳ್ಳಿಗಳ ಆರ್ಥಿಕತೆ ನುಚ್ಚುನೂರಾಗಿದೆ. ಬದುಕು ನಡೆಸಲು ದುಡಿಯುವ ಜನರು ನಗರ–ಪಟ್ಟಣಗಳನ್ನು ಆಶ್ರಯಿಸಬೇಕಾಗಿದೆ. ಪರಿಣಾಮವಾಗಿ ದೊಡ್ಡ ಪ್ರಮಾಣದ ವಲಸೆ ನಡೆಯುತ್ತಿದೆ. ಆದರೆ, ಇದಕ್ಕೆ ಅಗತ್ಯವಿರುವ ಸಾಮಾಜಿಕ ರಕ್ಷಣೆಯ ಹೊಣೆಯನ್ನು ಸರ್ಕಾರಗಳು ಹೊರುತ್ತಿಲ್ಲ. ಹಾಗಾಗಿ ನಗರಕ್ಕೆ ವಲಸೆ ಬಂದ ಮಹಿಳೆಯರು ಮೊದಲಿಗಿಂತ ಹೆಚ್ಚು ಅಸುರಕ್ಷಿತ ಸನ್ನಿವೇಶಗಳನ್ನು ಎದುರಿಸುತ್ತಿದ್ದಾರೆ. ಕೆಲಸದ ಸ್ಥಳದಲ್ಲಿ ಉಂಟಾಗುವ ಲೈಂಗಿಕ, ಮಾನಸಿಕ ಕಿರುಕುಳಗಳು ಮಹಿಳೆಯರನ್ನು ಕಾಡುತ್ತಿವೆ.

ಜಾಗತೀಕರಣದಿಂದ ಮಹಿಳೆಯರು ಕುಟುಂಬದ ಆದಾಯದ ಬಹುಮುಖ್ಯ ಭಾಗವನ್ನು ಗಳಿಸಲು ಆರಂಭಿಸಿದ್ದಾರೆ. ಆದರೆ ಇದರಿಂದ ಕೌಟುಂಬಿಕ ಮೌಲ್ಯವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆಯೇನೂ ಆಗಿಲ್ಲ. ಅನಿವಾರ್ಯ

